**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ನ್ಯಾಯಾಲಯ, ಮದ್ದೂರು.**

**ಸಿಸಿ 834/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಮಂಜುನಾಥ | ಚಾ.ಸಾ-3 |
| ತಂದೆಯ ಹೆಸರು | - | ಜಯರಾಮು ಕೆ ಹೆಚ್ | ಪ್ರಾ.ಸಾ-2 |
| ವಯಸ್ಸು | - | 42 ವರ್ಷ | |
| ಉದ್ಯೋಗ | - | ಸಹ ಶಿಕ್ಷಕರು | |
| ವಾಸಸ್ಥಳ | - | ಮದ್ದೂರು | |

ದಿನಾಂಕಃ 05-02-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:ಅಭಿಯೋಜನೆಯ ಪರಃ ಎಪಿಪಿ ಯವರಿಂದ:**

ಸಾಕ್ಷಿಗೆ  ಒಂದು ದಾಖಲೆಯನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆ ಮಹಜರ್ ಆಗಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2 ಬಿ ಎಂದು ಗುರುತಿಸಲಾಯಿತು.  ಸದರೀ ಸಹಿಯನ್ನು ದಿನಾಂಕಃ 09.07.2020 ರಂದು ಸರ್ಕಾರಿ ಪೌಡಶಾಲೆ, ಕೆ ಬೆಳ್ಳೂರಿನಲ್ಲಿ ಮಾಡಿರುತ್ತೇನೆ.  ಸದರೀ ಮಹಜರ್ ನಾನು, ಚಾ.ಸಾ. 1 ಮತ್ತು 2 ರವರು ಸಹಿ ಮಾಡಿರುತ್ತೇವೆ.  ಮಹಜರ್ ಕ್ರಮವನ್ನು ಮಧ್ಯಾಹ್ನ 03.00 ರಿಂದ 03.45 ರ ತನಕ ಜರುಗಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು: ಶ್ರೀಮತಿ ವಿ ಎಸ್ ರವರಿಂದ**

ಪೋಲೀಸರು ಮಹಜರ್ ಕ್ರಮ ಜರುಗಿಸಲು ಬರುವಂತೆ ನನಗೆ ಯಾವುದೇ ನೋಟೀಸ್ ನೀಡಿಲ್ಲ.  ಮಹಜರ್ ಕ್ರಮವನ್ನು ಮಧ್ಯಾಹ್ನ 03.00 ರಿಂದ 03.45 ರ ತನಕ ಜರುಗಿಸಿರುತ್ತಾರೆ.  ನಿ.ಪಿ. 2 ಮಹಜರ್ ನಲ್ಲಿ ಪೋಲೀಸರು ಏನು ಬರೆದಿದ್ದಾರೆಂದು ನಿಮಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.  ಚಾ.ಸಾ. 1 ರವರು ನಿಮ್ಮ ಮುಖ್ಯ ಶಿಕ್ಷಕರು ಎಂದರೆ ಸರಿ. ನೀವು ಸದರೀ ಶಾಲೆಯಲ್ಲಿ ಹಿರಿಯ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದೀರಿ ಎಂದರೆ ಸರಿ.

ಚಾ.ಸಾ. 2 ರವರು ನಿಮ್ಮ ಶಾಲೆಯ ಎಸ್ ಡಿ ಎಂ ಸಿ ಅಧ್ಯಕ್ಷರು ಎಂದರೆ ಸರಿ. ಚಾ.ಸಾ. 1 ಮತ್ತು 2 ರವರು ಹೇಳಿದ ರೀತಿಯಲ್ಲಿ ನೀವು ಕೆಲಸ ನಿರ್ವಹಿಸಬೇಕೆಂದರೆ ಸರಿ. ನಿಮ್ಮ ಶಾಲೆಯಲ್ಲಿ ಯಾವುದೇ ಕಳ್ಳತನವಾಗಿಲ್ಲ ಎಂದರೆ ಸರಿಯಲ್ಲ. ಚ.ಸಾ. 1 ಮತ್ತು 2 ರವರ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿ.ಪಿ. 2 ಮಹಜರ್ ನ್ನು ಚಾ.ಸಾ. 1, 2 ಮತ್ತು ನೀವು ಮತ್ತು ಪೋಲೀಸರು ಶಾಮಿಲಾಗಿ ಠಾಣೆಯಲ್ಲಿಯೇ ಸೃಷ್ಟಿ ಮಾಡಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಶಾಲೆಯಲ್ಲಿ ಯಾವುದೇ ಕಳ್ಳತನವಾಗದೇ ಇದ್ದರೂ, ಆರೋಪಿತರಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿ.ಪಿ. 2 ಸುಳ್ಳು ಮಹಜರ್ ಗೆ ನೀವು ಠಾಣೆಯಲ್ಲಿಯೇ ಸಹಿ ಮಾಡಿದ್ದೀರಿ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಧೀಶರು, ಮದ್ದೂರು.

ಸಾಕ್ಷಿ ಸಹಿಃ